# KARNATAKA LOKAYUKTA

No.UPLOK-2/DE/716/2017/ARE-14

Multi Storied Building,
Dr. B.R. Ambedkar Veedhi,
Bengaluru-560 001,
Dated 02.09.2022.

## RECOMMENDATION

Sub:- Departmental inquiry against Sri.B.R. Dharmendra Kumar, Panchayath Development Officer, Edu Gram Panchayath, Karkala Taluk, Udupi District – reg.

Ref:- 1) Government Order No.ಗ್ರಾಅಪ/328/ಗ್ರಾಪಂಕಾ/2017, ಬೆಂಗಳೂರು, ದಿ:18–05–2017.

2) Nomination order No.UPLOK-2/DE/716/2017, dated 29.05.2017 of the Upalokayukta, State of Karnataka.

3) Inquiry report dated 29.08.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its order dated 18.05.2017 initiated the disciplinary proceedings against Sri.B.R. Dharmendra Kumar, Panchayath Development Officer, Edu Gram Panchayath, Karkala Taluk, Udupi District [hereinafter referred to as Delinquent Government
~~~~~~

Officer/official, for short as 'DGO'] and entrusted the Departmental Inquiry to this Institution.

2. This Institution by Nomination Order No.UPLOK-2/DE/716/2017, dated 29.05.2017, nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. As per order No.UPLOK-2/DE/2017, dtd:4-7-2017, the inquiry was transferred from ARE-1 to ARE-7. Thereafter by order No.UPLOK-1 & 2/DE/ Transfers/2018, dated 6-8-2018, the inquiry was transferred to Additional Registrar of Enquiries-14, Karnataka Lokayukta, Bengaluru, to conduct Departmental inquiry against DGO.

3. The DGO Sri.B.R.Dharmendra Kumar, Panchayath Development Officer, Edu Gram Panchayath, Karkala Taluk, Udupi District, was tried for the following charge:-

**ಅನುಬಂಧ–1**

**ದೋಷಾರೋಪಣೆ–1**

ಅ) ಆ.ಸ.ನೌ.ರ ಶ್ರೀ.ಬಿ.ಆರ್.ಧರ್ಮೇಂದ್ರ ಕುಮಾರ್ ಆದ ನೀವು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈದು ಗ್ರಾಮ ಪಂಚಾಯಿತಿ,

ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶ್ರೀಮತಿ.ಸುಂದರಿ ರವರು ಕಟ್ಟಡವನ್ನು ಸರ್ವೆ ನಂ.361 ರಲ್ಲಿ ಕಟ್ಟುವುದಾಗಿ ತಿಳಿಸಿ ಸರ್ವೆ ನಂ.202/3 (ಸರ್ಕಾರಿ ಜಾಗ) ಹಾಗೂ 202/11 (ಪಟ್ಟ ಜಾಗದಲ್ಲಿ) ಮನೆ ಕಟ್ಟುತ್ತಿರುವ ಬಗ್ಗೆ ದೂರುದಾರರಿಂದ ಆಕ್ಷೇಪಣೆ ಬಂದಿದ್ದರೂ ಸಹ ಸದರಿ ಶ್ರೀಮತಿ.ಸುಂದರಿ ಇವರ ಕಟ್ಟಡ ರಚನೆಗೆ ಅವರಿಗೆ ನೀಡಲಾಗಿದ್ದ ನೋಟೀಸ್‌ನಲ್ಲಿ ತಿಳಿಸಿದಂತೆ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

ಆ) ಸದರಿ ಶ್ರೀಮತಿ.ಸುಂದರಿಯವರು ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ಕಟ್ಟುತ್ತಿದ್ದರೂ ಕೂಡ ಅವರ ಕಟ್ಟಡದ ರಚನೆಯನ್ನು ನಿಲ್ಲಿಸದೇ, ಅವರಿಗೆ ಕಟ್ಟಡವನ್ನು ಪೂರ್ಣಗೊಳಿಸಲು ಅನುಕೂಲ ಮಾಡಿಕೊಟ್ಟು, ಕಟ್ಟಡದ ನಂಬರ್‌ನ್ನು ಸಹ ನೀಡಿ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

ಇ) ಸದರಿ ಶ್ರೀಮತಿ.ಸುಂದರಿಯವರು ಅಕ್ರಮವಾಗಿ ಕಟ್ಟಡ ರಚನೆ ಮಾಡುತ್ತಿರುವುದು ಕಂಡುಬಂದಿದ್ದರೂ ಹಾಗೂ ಅವರ ಪರವಾಗಿ ಪಂಚಾಯತಿ ನಿರ್ಣಯ ಕೈಗೊಂಡಿರುವುದು ಕಾನೂನು ಬಾಹಿರವೆಂದು ತಿಳಿದಿದ್ದರೂ ಸಹ ಆ.ಸ.ನೌ.ರರಾದ ನೀವು ಸದರಿ ನಿರ್ಣಯಗಳನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸಿ ಸದರಿ ನಿರ್ಣಯಗಳನ್ನು ರದ್ದುಪಡಿಸಲು ಕ್ರಮ ಜರುಗಿಸದೇ ಶ್ರೀಮತಿ.ಸುಂದರಿಯವರಿಗೆ ಸಹಕರಿಸಿ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has ***'proved'*** the above charge against the DGO Sri.B.R.Dharmendra Kumar, Panchayath Development Officer, Edu Gram Panchayath, Karkala Taluk, Udupi District.

5. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGO, furnished by the Inquiry Officer, DGO is due to retire from service on 31.05.2036.

7. Having regard to the nature of charge **'proved'** against DGO and considering the totality of circumstances,

> "it is hereby recommended to the Government to impose penalty of 'withholding **three** annual increments payable to DGO Sri.B.R.Dharmendra Kumar with cumulative effect."

8. Action taken in the matter shall be intimated to this Authority.

Connected records are enclosed herewith.

02/9/22

**(JUSTICE K.N.PHANEENDRA)**
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-716/2017/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/08/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಬಿ.ಆರ್ ಧರ್ಮೇಂದ್ರ ಕುಮಾರ್**, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಈದು ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/2248/2014/ಪಿಪಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 03/04/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/328/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 18/05/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/716/2017, ಬೆಂಗಳೂರು ದಿನಾಂಕ: 29/05/2017.
4. Order No.UPLOK-2/DE/2017 Bengaluru Dated: 4.7.2017 file transferred from ARE-1 to ARE-7.
5. Order No.UPLOK-1 & 2/DE/transfers/ 2018, Bengaluru, Dated 06/08/2018 file transferred from ARE-7 to ARE-14.

* * * * * *

ದೂರುದಾರರಾದ **ಶ್ರೀ. ವಿಜಯ ಕುಮಾರ್ ಎನ್** ಬಿನ್ ಆದಿರಾಜಯ, ನೂರಳಬೆಟ್ಟು, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ಬಿ.ಆರ್ ಧರ್ಮೇಂದ್ರ ಕುಮಾರ್**, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಈದು ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ದೂರು ದಾಖಲಾಗಿದ್ದು, ದೂರಿನಲ್ಲಿ ಈದು

ಗ್ರಾಮದ ಹೊಸ್ಮಾರಿನ ಶ್ರೀಮತಿ. ಸುಂದರಿ ಎಂ ಬಂಗೇರ ಇವರು ತಮ್ಮ ಸ್ವಂತ ಸ್ಥಳವಾದ ಸರ್ವೆ ನಂ.361/2ಬಿ ರಲ್ಲಿ ಮನೆ ಕಟ್ಟಲು ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದಿದ್ದು, ಅದರಂತೆ ಸದರಿ ಜಾಗದಲ್ಲಿ ಮನೆಯನ್ನು ನಿರ್ಮಿಸದೇ ಸದರಿ ಸ್ಥಳಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಮೀನು ಸರ್ವೆ ನಂ.202/3 ಹಾಗೂ 202/11 (ಪಟ್ಟಾ ಜಾಗ) ಕಾನೂನು ಬಾಹಿರವಾಗಿ ಮನೆ ಕಟ್ಟಿರುತ್ತಾರೆಂದು, ಸದರಿ ಕಟ್ಟಡಕ್ಕೆ ಮನೆ ನಂಬರ್ ನೀಡುವ ಬಗ್ಗೆ ದಿನಾಂಕ: 28/01/2014 ರಂದು ಪಂಚಾಯತಿ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿರುತ್ತಾರೆ. ಆದರೆ ಸದರಿ ಜಮೀನನ್ನು ಬಾಲಭವನ ನಿರ್ಮಾಣದ ಬಗ್ಗೆ ಕಾಯ್ದಿಸಬೇಕೆಂದು ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ಸದರಿ ಕಟ್ಟಡಕ್ಕೆ ಮನೆ ನಂಬರ್ ಆ.ಸ.ನೌ ರವರು ನೀಡಿರುತ್ತಾರೆ. ಆದ್ದರಿಂದ ಇವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಕೇಳಿಕೊಂಡಿರುತ್ತಾರೆ. ನಂತರ ಪ್ರಕರಣದ ತನಿಖೆಯನ್ನು ಕರ್ನಾಟಕ ಲೋಕಾಯುಕ್ತ ಪೋಲಿಸ್ ಉಡುಪಿಯ ಪೋಲಿಸ್ ಉಪಾಧೀಕ್ಷಕರಿಗೆ ವಹಿಸಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಮಾಡಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 18/05/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 29/05/2017 ರಂದು ಅಪರ ನಿಬಂಧಕರು, ವಿಚಾರಣೆಗಳು–1 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು–1 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–7 ರವರಿಗೆ ವರ್ಗಾವಣೆಗೊಂಡಿರುತ್ತದೆ. ನಂತರ ಉಲ್ಲೇಖ (5) ಅಪರ ನಿಬಂಧಕರು ವಿಚಾರಣೆಗಳು–7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 06/01/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ-1

2. ಅ) ಆ.ಸ.ನೌ.ರ ಶ್ರೀ.ಬಿ.ಆರ್.ಧರ್ಮೇಂದ್ರ ಕುಮಾರ್ ಆದ ನೀವು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈದು ಗ್ರಾಮ ಪಂಚಾಯಿತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶ್ರೀಮತಿ.ಸುಂದರಿ ರವರು ಕಟ್ಟಡವನ್ನು ಸರ್ವೇ ನಂ.361 ರಲ್ಲಿ ಕಟ್ಟುವುದಾಗಿ ತಿಳಿಸಿ ಸರ್ವೇ ನಂ.202/3 (ಸರ್ಕಾರಿ ಜಾಗ) ಹಾಗೂ 202/11 (ಪಟ್ಟ ಜಾಗದಲ್ಲಿ) ಮನೆ ಕಟ್ಟುತ್ತಿರುವ ಬಗ್ಗೆ ದೂರುದಾರರಿಂದ ಆಕ್ಷೇಪಣೆ ಬಂದಿದ್ದರೂ ಸಹ ಸದರಿ ಶ್ರೀಮತಿ.ಸುಂದರಿ ಇವರ ಕಟ್ಟಡ ರಚನೆಗೆ ಅವರಿಗೆ ನೀಡಲಾಗಿದ್ದ ನೋಟೀಸ್‌ನಲ್ಲಿ ತಿಳಿಸಿದಂತೆ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

ಆ) ಸದರಿ ಶ್ರೀಮತಿ. ಸುಂದರಿಯವರು ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ಕಟ್ಟುತ್ತಿದ್ದರೂ ಕೂಡ ಅವರ ಕಟ್ಟಡದ ರಚನೆಯನ್ನು ನಿಲ್ಲಿಸದೇ, ಅವರಿಗೆ ಕಟ್ಟಡವನ್ನು ಪೂರ್ಣಗೊಳಿಸಲು ಅನುಕೂಲ ಮಾಡಿಕೊಟ್ಟು, ಕಟ್ಟಡದ

ನಂಬರ್‌ನ್ನು ಸಹ ನೀಡಿ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

ಇ) ಸದರಿ ಶ್ರೀಮತಿ.ಸುಂದರಿಯವರು ಅಕ್ರಮವಾಗಿ ಕಟ್ಟಡ ರಚನೆ ಮಾಡುತ್ತಿರುವುದು ಕಂಡುಬಂದಿದ್ದರೂ ಹಾಗೂ ಅವರ ಪರವಾಗಿ ಪಂಚಾಯತಿ ನಿರ್ಣಯ ಕೈಗೊಂಡಿರುವುದು ಕಾನೂನುಬಾಹಿರವೆಂದು ತಿಳಿದಿದ್ದರೂ ಸಹ ಆ.ಸ.ನೌ.ರರಾದ ನೀವು ಸದರಿ ನಿರ್ಣಯಗಳನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸಿ ಸದರಿ ನಿರ್ಣಯಗಳನ್ನು ರದ್ದುಪಡಿಸಲು ಕ್ರಮ ಜರುಗಿಸದೇ ಶ್ರೀಮತಿ.ಸುಂದರಿಯವರಿಗೆ ಸಹಕರಿಸಿ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

3. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. ಶ್ರೀ. ವಿಜಯ್ ಕುಮಾರ್ ಬಿನ್ ಆದಿರಾಜ ಮುರಾಯ, 'ಜಯಧವಳ', ನೂರಳಬೆಟ್ಟು, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಬಿ.ಆರ್.ಧರ್ಮೇಂದ್ರ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈದು ಗ್ರಾಮ ಪಂಚಾಯಿತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. ಪ್ರಕರಣದ ಸಂಕ್ಷಿಪ್ತ ಸಾರಾಂಶ:- ದೂರುದಾರರು ತಮ್ಮ ದೂರಿನಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಈದು ಗ್ರಾಮದ ಹೊಸ್ಮಾರಿನ ಶ್ರೀಮತಿ.ಸುಂದರಿ ಎಂ. ಬಂಗೇರ ಇವರು ತಮ್ಮ ಸ್ವಂತ ಸ್ಥಳವಾದ ಸರ್ವೇ ನಂ.361/2ಬಿ ರಲ್ಲಿ ಮನೆ ಕಟ್ಟಲು ಪಂಚಾಯತಿ ವತಿಯಿಂದ ಪರವಾನಗೆ ಪಡೆದಿದ್ದು, ಅದರಂತೆ, ಸದರಿ ಜಾಗದಲ್ಲಿ ಮನೆಯನ್ನು ನಿರ್ಮಿಸದೇ ಸದರಿ ಸ್ಥಳಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಮೀನಿನಲ್ಲಿ ಕಾನೂನುಬಾಹಿರವಾಗಿ ಮನೆ ಕಟ್ಟಿರುತ್ತಾರೆಂದು, ಸದರಿ ಕಟ್ಟಡಕ್ಕೆ ಮನೆ ನಂಬರ್ ನೀಡುವ ಬಗ್ಗೆ ದಿನಾಂಕ 28/01/2014 ರಂದು ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿರುತ್ತಾರೆ. ಆದರೆ, ಸದರಿ ಜಮೀನನ್ನು ಬಾಲಭವನ ನಿರ್ಮಾಣದ ಬಗ್ಗೆ ಕಾಯ್ದಿರಿಸಬೇಕೆಂದು ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಸದರಿ ಕಟ್ಟಡಕ್ಕೆ ಮನೆ ನಂಬರ್ ಆ.ಸ.ನೌ.ರರು ನೀಡಿರುತ್ತಾರೆ. ಆದ್ದರಿಂದ, ಆ.ಸ.ನೌ.ರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹಾಗೂ ಸರ್ಕಾರಿ ಜಮೀನನ್ನು ಬಾಲಭವನ ನಿರ್ಮಾಣಕ್ಕೆ ಕಾಯ್ದಿರಿಸಬೇಕೆಂದು ಕೋರಿದ್ದರು.

6. ದೂರಿನ ಮೇಲೆ ಆ.ಸ.ನೌ.ರರಾದ ನೀವು ನಿಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ದಿನಾಂಕ 28/01/2014 ರಂದು ಮೇಲೆ ಹೇಳಿದ ವಿವಾದಿತ ಕಟ್ಟಡಕ್ಕೆ ಕಟ್ಟಡ ನಂಬರ್ ನೀಡುವಂತೆ ಸರ್ವಾನುಮತದಿಂದ

ನಿರ್ಣಯಿಸಲಾಗಿದ್ದು, ನಂತರ ಸದರಿ ಶ್ರೀಮತಿ.ಸುಂದರಿಯವರಿಗೆ ನೋಟೀಸನ್ನು ನೀಡಿ ಅವರು ಕಟ್ಟುತ್ತಿರುವ ಮನೆಯ ಜಾಗಕ್ಕೆ ಭೂ ಪರಿವರ್ತನೆ ಆದೇಶ ಪಡೆಯಲಾಗಿದೆಯೇ ಎನ್ನುವ ಬಗ್ಗೆ ಉತ್ತರ ಕೋರಿದ್ದು, ಅದಕ್ಕೆ ಸದರಿಯವರು ನಿರ್ಮಾಣ ಮಾಡಿದ ಸ್ಥಳಕ್ಕೆ ಭೂ ಪರಿವರ್ತನಾ ಆದೇಶ ಪಡೆಯಲಾಗಿರುತ್ತದೆ ಎಂದು ತಿಳಿಸಿ ಉತ್ತರ ನೀಡಿರುತ್ತಾರೆ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ, ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ತೀರ್ಮಾನದಂತೆ ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದಿರಿ.

7. ಆ.ಸ.ನೌ.ರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿ ಶ್ರೀಮತಿ.ಸುಂದರಿಯವರು ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿರುತ್ತಾರೆ. ಈ ಬಗ್ಗೆ ತಾವು ತಮ್ಮ ತಕರಾರನ್ನು ಪಂಚಾಯತಿಗೆ ಸಲ್ಲಿಸಿದಾಗ, ಆ.ಸ.ನೌ.ರರು ವಿವಾದಿತ ಮನೆ ಸ್ಥಳವನ್ನು ಸರ್ವೇ ಮೂಲಕ ಅಳತೆ ಮಾಡಿಸಿ ತಹಶೀಲ್ದಾರ್‌ರವರಿಂದ ಹಾಗೂ ಸರ್ವೇ ಇಲಾಖೆಯಿಂದ ವರದಿ ಪಡೆಯಬೇಕಾಗಿದ್ದು, ಆ.ಸ.ನೌ.ರರು ಕಾನೂನುಬಾಹಿರವಾಗಿ ಶ್ರೀಮತಿ.ಸುಂದರಿ ಎಂ. ಬಂಗೇರ ರವರಿಗೆ ಅನುಕೂಲವಾಗುವಂತೆ ಕಾನೂನುಬಾಹಿರವಾಗಿ ಪರವಾನಗೆ ಹಾಗೂ ಡೋರ್ ನಂಬರ್‌ನ್ನು ನೀಡಿರುತ್ತಾರೆಂದು ತಿಳಿಸಿದ್ದರು.

8. ಪ್ರಕರಣದ ತನಿಖೆಯನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಉಡುಪಿಯ ಪೊಲೀಸ್ ಉಪಾಧೀಕ್ಷಕರಿಗೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲಾಗುವುದು) ವಹಿಸಿದ್ದು, ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿ, ಶ್ರೀಮತಿ ಸುಂದರಿ ಎಂ. ಬಂಗೇರ ರವರು ನಿರ್ಮಿಸಿದ ಮನೆಯು ಹೆಚ್ಚಿನ ಭಾಗ ಈದು ಗ್ರಾಮದ ಸರ್ವೇ ನಂ.202/3 ರಲ್ಲಿಯೇ, ಉಳಿದ ಸ್ವಲ್ಪ ಭಾಗ ಶ್ರೀ.ಶಂಕರ್ ನಾರಾಯಣಮಯ್ಯ ಇವರಿಗೆ ಸೇರಿದ ಪಟ್ಟಾ ಸರ್ವೇ ನಂ.202/11 ರಲ್ಲಿ ಕಟ್ಟಿರುತ್ತಾರೆಂದು, ತಹಶೀಲ್ದಾರ್, ಕಾರ್ಕಳ ರವರು ನಕ್ಷೆ ಸಮೇತ

ವರದಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ ಹಾಗೂ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಡ ನಿರ್ಮಾಣ ಮಾಡಿರುವ ವಿಚಾರ ಈದು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ.ಧರ್ಮೇಂದ್ರ ಕುಮಾರ್ ರವರಿಗೆ ದಿ:07/09/2012ರ ಸಾಮಾನ್ಯ ಸಭೆಯಲ್ಲಿಯೇ ನಿರ್ಣಯಕ್ಕೆ ಬಂದಿದ್ದರೂ ಕೂಡ, ಸದರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕಾರ್ಕಳ ತಾಲ್ಲೂಕಿನ ತಹಶೀಲ್ದಾರ್‌ರವರಿಂದಾಗಲೀ, ಗ್ರಾಮ ಕರಣೀಕರಿಂದಾಗಲೀ ಸದರಿ ಜಾಗವು ಸರ್ಕಾರಿ ಜಾಗವೋ ಅಥವಾ ಪಟ್ಟಾ ಜಾಗವೋ ಎಂಬ ಬಗ್ಗೆ ದೃಡೀಕರಿಸಿಕೊಳ್ಳಲು ವರದಿಯನ್ನು ಪಡೆಯದೇ ದೂರುದಾರ ಗ್ರಾಮ ಪಂಚಾಯತಿ ಸದಸ್ಯರ ಆಕ್ಷೇಪಣೆ ನಡುವೆಯೂ ಶ್ರೀಮತಿ.ಸುಂದರಿ ಎಂ. ಬಂಗೇರ ರವರ ಸೊಸೆ ಗ್ರಾಮ ಪಂಚಾಯತಿ ಸದಸ್ಯೆಯಾದ ಶ್ರೀಮತಿ.ಲಾವಣ್ಯ ಇವರ ಒತ್ತಾಯದ ಮೇರೆಗೆ ಮನೆ ನಂಬರ್ 3/85ನ್ನು ನೀಡಿರುವುದು ಸ್ಪಷ್ಟಪಟ್ಟಿರುತ್ತದೆ ಹಾಗೂ ಆ.ಸ.ನೌ.ರರು ಕರ್ತವ್ಯಲೋಪವೆಸಗಿರುವುದು ದೃಡಪಟ್ಟಿರುತ್ತದೆ ಎಂದು ತಿಳಿಸಿದ್ದರು.

9. ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

10. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದೀರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ

ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರಾದ ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

11. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ: 07/02/2018 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

12. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

13. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

14. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯಲ್ಲಿ, ದೋಷಾರೋಪಣೆಯನ್ನು ಮಾಡಿದ ಎಲ್ಲಾ ವಿಷಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ, ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

15. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ. ಎನ್ ವಿಜಯಕುಮಾರ ಇವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 11 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಟಿ ನಾಗೇಶ ಶೆಟ್ಟಿ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.12 ರಿಂದ 26 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಪಿ.ಡಬ್ಲ್ಯೂ.1 ಇವರ ಪಾಟಿ ಸವಾಲಿನಲ್ಲಿ ನಿ.ಡಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ ರವರು ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ. ಅವರಿಗೆ ಪ್ರಶ್ನಾವಳಿಯನ್ನು ಮಾಡಲಾಗಿದೆ.

16. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

17. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

18. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

19. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

20. ದೂರುದಾರರಾದ ಶ್ರೀ. ವಿಜಯ ಕುಮಾರ್ ಎನ್ ಬಿನ್ ಆದಿರಾಜಯ, ನೂರಳಬೆಟ್ಟು, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ತಮ್ಮ ದೂರನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈಗಾಗಲೇ ಮೇಲ್ಕಂಡಂತೆ ಉಲ್ಲೇಖಿಸಲಾಗಿದೆ.

21. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 11 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2010 ರಿಂದ 2012 ರವರೆಗೆ ಇವರು ಈದು ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾಗ, ಶ್ರೀಮತಿ. ಸುಂದರಿ ಎಂ ಬಂಗೇರ ರವರು ಸರ್ವೆ ನಂ.310 ರಲ್ಲಿ ಮನೆ ಕಟ್ಟಲು ಪರವಾನಿಗೆಯನ್ನು ಕೇಳಿದ್ದರು, ಆದರೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಆ ಜಾಗ ಸರ್ಕಾರಿ ಜಾಗ ಎಂದು ಕಂಡುಬಂದಿದ್ದರಿಂದ, ಪರವಾನಿಗೆಯನ್ನು ನೀಡಲಿಲ್ಲ ಎಂದು ನುಡಿದಿರುತ್ತಾರೆ. ನಂತರ ಇವರ ಅವಧಿ ಮುಗಿದ ನಂತರ ಗ್ರಾಮ ಪಂಚಾಯಿತಿಯವರು ಅವರಿಗೆ ಮನೆ ಕಟ್ಟಿಕೊಳ್ಳಲು ಪರವಾನಿಗೆಯನ್ನು ನೀಡಿರುತ್ತಾರೆ ಅಲ್ಲದೇ ಶ್ರೀಮತಿ. ಸುಂದರಿ ಎಂ ಬಂಗೇರ ಇವರ ಸೊಸೆ ಲಾವಣ್ಯ ಇವರು ಈದು ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರು ಅಂತಾ ನುಡಿದಿರುತ್ತಾರೆ. ನಂತರ ಇವರು ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೆ ದೂರನ್ನು ಸಲ್ಲಿಸಿದ್ದರು, ಅವರುಗಳು ಕ್ರಮವನ್ನು ತೆಗೆದುಕೊಳ್ಳದ ಕಾರಣ ಈ ಸಂಸ್ಥೆಗೆ ನಿ.ಪಿ.1 ರಂತೆ ದೂರನ್ನು ನೀಡಿದ್ದು; ನಿ.ಪಿ.2 ಫಾರಂ ನಂ.1 ಮತ್ತು ನಿ.ಪಿ.3 ಫಾರಂ ನಂ.2; ನಿ.ಪಿ.4 ದಿನಾಂಕ: 10/08/2012 ರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ನಡುವಳಿಗಳು; ನಿ.ಪಿ.5 ದಿನಾಂಕ: 07/09/2012 ರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ನಡುವಳಿಗಳು; ನಿ.ಪಿ.6 ಸರ್ವೆ ನಂ.361/2ಎ, 361/2ಬಿ,

361/2ಬಿ–3, 361/2ಬಿ–1 ಹಾಗೂ 310ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ. ನಿ.ಪಿ.7 ದಿನಾಂಕ: 28/01/2014 ರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ನಡುವಳಿ; ನಿ.ಪಿ.8 ದೂರುದಾರರು ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪಂಚಾಯತಿಯವರಿಗೆ ದೂರು ನೀಡಿದ್ದ ಪ್ರತಿ; ನಿ.ಪಿ.9 ಶ್ರೀಮತಿ. ಸುಂದರಿ ಎಂ ಬಂಗೇರ ರವರ ಮನೆ ತೆರಿಗೆ ನೀಡಿದ ಬಗ್ಗೆ ರಶೀದಿ; ನಿ.ಪಿ.10 ದೂರುದಾರರು ತಹಶೀಲ್ದಾರ್ ಇವರಿಗೆ ನೀಡಿದ ದೂರಿನ ಪ್ರತಿ; ನಿ.ಪಿ.11 ದೂರುದಾರರು ನೀಡಿದ ಪ್ರತ್ಯುತ್ತರ ಇರುತ್ತದೆ.

22.ಶಿಸ್ತು ಪ್ರಾಧಿಕಾರ ತನಿಖಾಧಿಕಾರಿಗಳಾದ ಶ್ರೀ. ಟಿ ನಾಗೇಶ್ ಶೆಟ್ಟಿ ಇವರನ್ನು ಪಿ.ಡಬ್ಲ್ಯೂ.2 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.12 ರಿಂದ 26 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಪಿ.ಡಬ್ಲ್ಯೂ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 02/08/2012 ರಂದು ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಈದು ಸರ್ವೆ ನಂ.361/2ಬಿ ರಲ್ಲಿ 0.06 ಸೆಂಟ್ಸ್ ಜಮೀನನ್ನು ಮನೆ ಕಟ್ಟಡಕ್ಕಾಗಿ ಭೂ ಪರಿವರ್ತನೆ ಮಾಡಿದ್ದು, ಅದರಂತೆ ಪಂಚಾಯತಿಗೆ ಸದರಿ ಜಮೀನಿನಲ್ಲಿ ಮನೆ ಕಟ್ಟಡವನ್ನು ನಿರ್ಮಾಣ ಮಾಡಲು, ಪಹಣಿ ಪತ್ರಿಕೆ, ಅಂದಾಜು ವೆಚ್ಚ, ನಕ್ಷೆ ಹಾಗೂ ಭೂ ಪರಿವರ್ತನದ ಆದೇಶದ ನಕಲನ್ನು ಲಗತ್ತಿಸಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ದಿನಾಂಕ: 10/08/2012 ರಲ್ಲಿ ಜರುಗಿದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆ–5 ರಲ್ಲಿ ನಿರ್ಣಯ ನಂ.5(4)/2012–13 ರಂತೆ ಶ್ರೀಮತಿ. ಸುಂದರಿ ಎಂ ಬಂಗೇರ ರವರಿಗೆ ಸದರಿ ಜಾಗದಲ್ಲಿ ಕಟ್ಟಡ ಪರವಾನಿಗೆ ನೀಡುವಂತೆ ನಿರ್ಣಯವನ್ನು ಕೈಗೊಂಡಿರುತ್ತಾರೆ. ಅದೇ ದಿವಸ ಗ್ರಾಮ ಸಭೆಯ ಸಾಮಾನ್ಯ ಸಭೆ–5ರ ನಿರ್ಣಯ ನಂ.6/11/2012–13(7) ರಲ್ಲಿ ಸದರಿ ಶ್ರೀಮತಿ. ಸುಂದರಿ ಎಂ ಬಂಗೇರ ರವರಿಗೆ ಸರ್ವೆ ನಂ.361/2ಬಿ ರಲ್ಲಿ ಪರವಾನಿಗೆಯನ್ನು ಪಡೆದ ಜಾಗದಲ್ಲಿ ಮನೆ ಕಟ್ಟಡ ನಿರ್ಮಾಣ ಮಾಡದೇ ಸರ್ಕಾರಿ ಜಾಗದಲ್ಲಿ ಮನೆ ನಿರ್ಮಾಣ ಮಾಡುತ್ತಿರುವುದಾಗಿ ದೂರುದಾರರು ಸಾಮಾನ್ಯ ಸಭೆಯಲ್ಲಿ ಆಕ್ಷೇಪಣೆ ಮಾಡಿದ್ದು, ಆದ್ದರಿಂದ ಸದರಿ ಶ್ರೀಮತಿ. ಸುಂದರಿ ಎಂ ಬಂಗೇರ ರವರು ಸಭೆಗೆ ತಪ್ಪು ಮಾಹಿತಿ ನೀಡಿರುತ್ತಾರೆಂದು ಸದರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಅವರಿಗೆ ನೋಟಿಸ್ ಜಾರಿ ಮಾಡುವಂತೆ,

ಸದರಿ ಜಾಗ ಸರ್ಕಾರ ಜಾಗವಾಗಿದ್ದರೆ ಅದನ್ನು ತೆರವುಗೊಳಿಸಿ ಆ ಜಾಗವನ್ನು ಬಾಲಭವನಕ್ಕೆ ಮೀಸಲು ಇಡುವಂತೆ ಕಾರ್ಕಳ ತಹಶೀಲ್ದಾರ್ ಇವರಿಗೆ ಪತ್ರ ವ್ಯವಹಾರ ಮಾಡಬೇಕೆಂದು ಸಭೆಯಲ್ಲಿ ನಿರ್ಣಯ ಕೈಗೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ.

23.ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಆದರೂ ಕೂಡು ದಿನಾಂಕ: 28/08/2012 ರಂದು ಸದರಿ ಶ್ರೀಮತಿ. ಸುಂದರಿ ಎಂ ಬಂಗೇರ ಇವರಿಗೆ ಮನೆ ಕಟ್ಟಡ ನಿರ್ಮಾಣ ಮಾಡಲು ನಂ.12/2012-13 ರಲ್ಲಿ ಗ್ರಾಮ ಪಂಚಾಯಿತಿಯಿಂದ ಪರವಾನಿಗೆಯನ್ನು ನೀಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಮನೆ ನಿರ್ಮಾಣ ಮಾಡಿದ ಸ್ಥಳವನ್ನು ಪರಿಶೀಲನೆ ಮಾಡಿ ಅದು ಖಾಸಗೀ ಸ್ಥಳವೋ ಅಥವಾ ಸರ್ಕಾರಿ ಸ್ಥಳವೋ ಎಂಬ ಬಗ್ಗೆ ದೃಢೀಕರಣ ನೀಡುವಂತೆ ದಿನಾಂಕ: 07/09/2012 ರಂದು ಈದು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ಪಿ.ಡಿ.ಓ ರವರು ಗ್ರಾಮ ಕರಣಿಕರಿಗೆ ಹಾಗೂ ತಹಶೀಲ್ದಾರ್, ಕಾರ್ಕಳ ಇವರಿಗೆ ನಿ.ಪಿ.15 ಮತ್ತು 16 ಅಂತೆ ಪತ್ರವನ್ನು ಬರೆದಿರುತ್ತಾರೆ ಅಂತಾ ನುಡಿದಿರುತ್ತಾರೆ. ಮುಂದುವರೆದು ದಿನಾಂಕ: 07/09/2012 ರಂದು ಪಂಚಾಯತಿಯಲ್ಲಿ ಕೈಗೊಂಡ ನಿರ್ಣಯದಂತೆ ಆ.ಸ.ನೌ ರವರು ಶ್ರೀಮತಿ. ಸುಂದರಿ ಎಂ ಬಂಗೇರ ಇವರಿಗೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ನಿ.ಪಿ.17 ರಂತೆ ನೋಟಿಸ್‌ನ್ನು ಜಾರಿ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

24.ಮುಂದುವರೆದು ತಮ್ಮ ಸಾಕ್ಷಿಯಲ್ಲಿ ದಿನಾಂಕ: 28/01/2014 ರಂದು ಗ್ರಾಮ ಪಂಚಾಯತಿಯ ಗ್ರಾಮ ಸಭೆ-8 ನಿರ್ಣಯ ನಂ.7 ರಲ್ಲಿ ತಹಶೀಲ್ದಾರ್, ಕಾರ್ಕಳ ಹಾಗೂ ಗ್ರಾಮ ಕರಣಿಕರವರಿಂದ ಸರ್ವೆ ಮಾಡಿದ ಬಗ್ಗೆ ಉತ್ತರ ಬಾರದಿದ್ದಾಗ, ಸದರಿ ಶ್ರೀಮತಿ. ಸುಂದರಿ ಎಂ ಬಂಗೇರ ಇವರಿಗೆ ಮನೆ ನಂಬರ್ ನೀಡುವಂತೆ ಅವರ ಸೊಸೆ ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀಮತಿ. ಲಾವಣ್ಯ ರವರು ಸಭೆಯಲ್ಲಿ ಒತ್ತಾಯ ಮಾಡಿದ ಮೇರೆಗೆ ಮನೆ ನಂಬರ್ ನೀಡಲು ನಿ.ಪಿ.7 ರಂತೆ ನಿರ್ಣಯ ಕೈಗೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ದಿನಾಂಕ: 04/01/2016 ರಂದು ತನಿಖಾಧಿಕಾರಿಗಳು ಶ್ರೀಮತಿ. ಸುಂದರಿ ಎಂ ಬಂಗೇರ ಇವರು ನಿರ್ಮಿಸಿರುವ ಮನೆ ಅವರ ಸ್ವಂತ ಜಾಗದಲ್ಲಿ ಬರುತ್ತದೆಯೋ ಅಥವಾ ಸರ್ಕಾರ ಜಾಗದಲ್ಲಿ

ಬರುತ್ತದೆಯೋ ಎನ್ನುವ ಬಗ್ಗೆ ಸರ್ವೆಯರ್‌ನಿಂದ ಸರ್ವೆ ಮಾಡಿಸಿ ಮಾಹಿತಿ ನೀಡುವಂತೆ ನಿ.ಪಿ.18 ರಂತೆ ಮನವಿಯನ್ನು ಮಾಡಿಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಮುಂದುವರೆದು ದಿನಾಂಕ: 19/01/2016 ರಂದು ತಹಶೀಲ್ದಾರ್, ಕಾರ್ಕಳ ಇವರು ತಮ್ಮ ವರದಿ ನಂ.ಎಂಎಜಿ/ಸಿಆರ್/167/1516 ದಿನಾಂಕ: 18/01/2016ರಂತೆ ವರದಿಯನ್ನು ನೀಡಿದ್ದು, ಸದರಿ ವರದಿಯಲ್ಲಿ ಶ್ರೀಮತಿ. ಸುಂದರಿ ಎಂ ಬಂಗೇರ ಇವರು ನಿರ್ಮಿಸಿದ ಮನೆಯು ಹೆಚ್ಚಿನ ಭಾಗವು ಸರ್ಕಾರಿ ಸರ್ವೆ ನಂ.202/3 ರಲ್ಲಿ ಹಾಗೂ ಉಳಿದ ಸ್ವಲ್ಪ ಭಾಗ ಸರ್ವೆ ನಂ.202/11 ರಲ್ಲಿ ಬರುವುದಾಗಿ ನಿ.ಪಿ.19 ರಂತೆ ವರದಿಯನ್ನು ನೀಡಿದ್ದು, ಭೂಮಾಪಕರು ನಿ.ಪಿ.20 ರಂತೆ ನಕ್ಷೆಯನ್ನು ಸಹ ನೀಡಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಇವರು ದಿನಾಂಕ: 27/01/2016 ರಂದು ಶ್ರೀಮತಿ. ಸುಂದರಿ ಎಂ ಬಂಗೇರ ಇವರು ನಿರ್ಮಿಸಿದ ಮನೆ ಮತ್ತು ಸ್ಥಳ ಪರಿಶೀಲನೆ ಮಾಡಿ ನಿ.ಪಿ.23 ರಂತೆ ಶ್ರೀಮತಿ. ಸುಂದರಿ ಎಂ ಬಂಗೇರ ಇವರ ಹೇಳಿಕೆಯನ್ನು ಪಡೆದುಕೊಂಡು, ನಿ.ಪಿ.24 ಮತ್ತು 25 ರಂತೆ ಕಟ್ಟಡದ ಛಾಯಾಚಿತ್ರಗಳನ್ನು ತೆಗೆದುಕೊಂಡು ನಿ.ಪಿ.26 ರಂತೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

25. ಪಿ.ಡಬ್ಲ್ಯೂ.2 ರವರು ತಮ್ಮ ವರದಿಯಲ್ಲಿ ಆ.ಸ.ನೌ ರವರು ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಸರ್ಕಾರ ಜಾಗದಲ್ಲಿ ಮನೆ ನಿರ್ಮಾಣ ಮಾಡಿರುವುದು ಪ್ರಾರಂಭದಿಂದಲೇ ಗಮನಕ್ಕೆ ಬಂದಿದ್ದರೂ ಕೂಡ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ವರದಿಯಲ್ಲಿ ತಿಳಿಸಿರುತ್ತಾರೆ.

26. ಪಿ.ಡಬ್ಲ್ಯೂ.1 ಮತ್ತು 2 ಇವರ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಹಾಗೂ ಆ.ಸ.ನೌ ಪರ ವಕೀಲರು ಮಾಡಿದ ಪಾಟಿಸವಾಲನ್ನು ಪರಿಗಣಿಸಿದಾಗ ಪಿ.ಡಬ್ಲ್ಯೂ.2 ಇವರು ನೀಡಿರುವ ವರದಿಯಲ್ಲಿ ಅಂದರೆ ತಹಶೀಲ್ದಾರ್, ಕಾರ್ಕಳ ರವರು ನೀಡಿದ ವರದಿ ಹಾಗೂ ಭೂಮಾಪಕರು ನೀಡಿದ ನಕ್ಷೆ (ನಿ.ಪಿ.19 & 20) ರಲ್ಲಿ ಬರೆದ ವಿಷಯನ್ನು ಅಲ್ಲಗಳೆದಿರುವುದಿಲ್ಲ. ಆ.ಸ.ನೌ ರವರ ಪ್ರಕಾರ ಅನ್ಯಕ್ರಾಂತ ಮಾಡಿಸಿಕೊಂಡ ಜಮೀನನ್ನು ಹೊರತುಪಡಿಸಿ ಅವರದ್ದೇ ಜಮೀನು ಇದ್ದರೆ ಅದರಲ್ಲಿ ಮನೆ ಕಟ್ಟಿದ್ದೇ ಆದರೆ ಅದು ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ ಅಂತಾ ವಾದ ಇರುತ್ತದೆ.

ಆದರೆ ನಿ.ಪಿ.19 ಮತ್ತು 20 ರ ಪ್ರಕಾರ ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಕಟ್ಟಿದ ಮನೆಯು ಸರ್ಕಾರಿ ಸರ್ವೆ ನಂ.202/3 ರಲ್ಲಿ ಹಾಗೂ ಉಳಿದ ಸ್ವಲ್ಪ ಭಾಗ 202/11 ರಲ್ಲಿ ಬರುತ್ತದೆ ಅಂತಾ ನಮೂದು ಇರುತ್ತದೆ. ತನಿಖಾಧಿಕಾರಿಗಳು ಆ.ಸ.ನೌ ರವರಿಗೆ ನಿ.ಪಿ.19 ಮತ್ತು 20 ರ ಬಗ್ಗೆ ಮಾಹಿತಿ ನೀಡಲು ಕೋರಿದಾಗ ಅವರು ನಿ.ಪಿ.22 ರಂತೆ ಮಾಹಿತಿಯನ್ನು ನೀಡಿರುತ್ತಾರೆ. ನಿ.ಪಿ.23 ರಲ್ಲಿ "ತಹಶೀಲ್ದಾರ್ ರವರ ಪತ್ರದ ಪ್ರತಿಯಲ್ಲಿ ಉಲ್ಲೇಖಿಸಿರುವಂತೆ 202/3 ಹಾಗೂ 202/11 ರಲ್ಲಿ ಸದರಿ ಮನೆ ಇರುವ ಬಗ್ಗೆ ದೃಢೀಕರಣ ಇರುತ್ತದೆ. ಆದರೆ ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಪಂಚಾಯಿತಿಗೆ ತಪ್ಪು ಮಾಹಿತಿ ನೀಡಿ ಕಟ್ಟಡದ ಪರವಾನಿಗೆ ಮತ್ತು ಮನೆ ನಂಬರ್‌ನ್ನು ಪಡೆದಿರುತ್ತಾರೆ. ಆದ್ದರಿಂದ ಈ ಬಗ್ಗೆ ತಮ್ಮ ಪತ್ರವನ್ನು (ತನಿಖಾಧಿಕಾರಿಗಳ ಪತ್ರವನ್ನು) ಮುಂದಿನ ಸಾಮಾನ್ಯ ಸಭೆಗೆ ಮಂಡಿಸಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಕ್ರಮ ತೆಗೆದುಕೊಂಡ ಬಗ್ಗೆ ವರದಿ ಮಾಡಲಾಗುವುದೆಂದು" ತಿಳಿಸಿರುತ್ತಾರೆ. ನಿ.ಪಿ.22 ಇದು ದಿನಾಂಕ: 25/01/2016 ರದ್ದು ಇರುತ್ತದೆ. ಆದರೆ ಇಲ್ಲಿಯವರೆಗೆ ಅಂದರೆ ಈ ವಿಚಾರಣೆಯಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಅಲ್ಲದೇ, ಪಿ.ಡಬ್ಲ್ಯೂ.2 ಇವರ ಪಾಟಿಸವಾಲಿನಲ್ಲಿಯೂ ಸಹ ಏನು ಕ್ರಮ ತೆಗೆದುಕೊಳ್ಳಲಾಗಿದೆ ಅಂತಾ ವಿವರಣೆ ನೀಡಿರುವುದಿಲ್ಲ.

27.ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಪರವಾನಿಗೆಯನ್ನು ಪಡೆದುಕೊಂಡ ಜಾಗವನ್ನು ಹೊರತುಪಡಿಸಿ ಬೇರೆ ಜಾಗದಲ್ಲಿ ಮನೆ ಕಟ್ಟುತ್ತಿದ್ದರು ಎನ್ನುವ ಬಗ್ಗೆ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ನಿ.ಪಿ.7ನ್ನು ಹಾಜರುಪಡಿಸಿದ್ದು ಇರುತ್ತದೆ. ಅದರ ಸಂಬಂಧಪಟ್ಟ ನಡುವಳಿಕೆಯನ್ನು ನಿ.ಪಿ.7(ಎ) ಅಂತಾ ಗುರುತಿಸಲಾಗಿರುತ್ತದೆ. ನಿ.ಪಿ.7 ರಲ್ಲಿ ಈಗಾಗಲೇ ಮೇಲೆ ಹೇಳಿದಂತೆ ಶ್ರೀಮತಿ. ಸುಂದರಿ ಎಂ ಬಂಗೇರ ಇವರಿಗೆ ಕಟ್ಟಡ ಪರವಾನಿಗೆ ನೀಡುವಾಗ ದೂರುದಾರರು ಆಕ್ಷೇಪಣೆ ಮಾಡಿದ್ದರೂ ಸಹಿತ ಪರವಾನಿಗೆಯನ್ನು ನೀಡಲಾಗಿದೆ ಅಂತಾ ಕಂಡುಬರುತ್ತದೆ. ಆ.ಸ.ನೌ ರವರಿಗೆ ದಿನಾಂಕ: 10/08/2012 ರಲ್ಲಿ ಶ್ರೀಮತಿ. ಸುಂದರಿ ಎಂ ಬಂಗೇರ ರವರು ಪರವಾನಿಗೆ ಪಡೆದ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡದೇ ಬೇರೆ ಕಡೆಗೆ ನಿರ್ಮಾಣ ಮಾಡುತ್ತಿದ್ದಾರೆ ಅಂತಾ ಕಂಡುಬಂದರೂ ಸಹಿತ ಇವರು ಸ್ಥಳಕ್ಕೆ ಭೇಟಿ ನೀಡದೇ

ಕಟ್ಟಡವನ್ನು ಪರಿಶೀಲಿಸದೇ ದಿನಾಂಕ: 28/08/2012 ರಂದು ಕಟ್ಟಡ ನಿರ್ಮಾಣ ಮಾಡಲು ನಂ.12/2012-13 ರಲ್ಲಿ ಪರವಾನಿಗೆಯನ್ನು ನೀಡಿರುತ್ತಾರೆ ಅಂತಾ ಕಂಡುಬರುತ್ತದೆ. ಆ.ಸ.ನೌ ರವರು ತಮ್ಮ ಲಿಖಿತ ವಾದದಲ್ಲಿ ಪರವಾನಿಗೆಯನ್ನು ನೀಡುವ ವೇಳೆಯಲ್ಲಿ ದೂರುದಾರರು ತಕರಾರು ಸಲ್ಲಿಸಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದರೆ The Karnataka Panchayath Raj (Grama Panchayaths Control Errection of Buildings) Rules 1994 ನಿಯಮ 4 ರಂತೆ ಯಾರಾದರೂ ಕಟ್ಟಡವನ್ನು ಕಟ್ಟಲು ಅರ್ಜಿ ಸಲ್ಲಿಸಿದಾಗ ಗ್ರಾಮ ಪಂಚಾಯತಿಯವರು ಅದಕ್ಕೆ ಸಂಬಂಧಪಟ್ಟಂತೆ ಯಾರದಾದರು ತಕರಾರು ಇರುತ್ತದೆ ಎನ್ನುವ ಬಗ್ಗೆ ಸಾರ್ವಜನಿಕವಾಗಿ ನೋಟಿಸ್ ನೀಡಬೇಕಾಗುತ್ತದೆ. ನಿಯಮ 4 ನ್ನು ಈ ಕೆಳಗಿನಂತೆ ಯಥಾವತ್ತಾಗಿ ನಮೂದಿಸಲಾಗಿದೆ.

> ***4. Calling for objections, etc.*** - ***(1)*** *The Grama Panchayat may, on receipt of an application under Rule 3, give public notice by affixing such notice on the notice board of the office of the Grama Panchayat calling for objections thereto, within a period not exceeding seven days from the date of such notice, as may be specified therein.*
>
> ***(2)*** *if any objections are received within the time specified regarding the proposed erection of the building the Grama Panchayat shall consider such objections before granting or refusing the permission.*

ಆದರೆ ಆ.ಸ.ನೌ ರವರು ನಿಯಮ 4 ನ್ನು ಪಾಲಿಸಿರುತ್ತಾರೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ದೂರುದಾರರು ತಕರಾರು ಸಲ್ಲಿಸಿರುವುದಿಲ್ಲ ಅಂತಾ ಹೇಳುವುದು ಸಮಂಜಸ ಇರುವುದಿಲ್ಲ. ಅದಲ್ಲದೇ, ಕಟ್ಟಡ

ಕಟ್ಟಿಕೊಳ್ಳಲು ಪರವಾನಿಗೆ ನೀಡಿದ ನಂತರ ದಿನಾಂಕ: 07/09/2012 ರಂದು ನಿ.ಪಿ.15 ರಂತೆ ಗ್ರಾಮ ಕರಿಣಿಕರಿಗೆ ನಿ.ಪಿ.16 ರಂತೆ ತಹಶೀಲ್ದಾರ್ ಇವರಿಗೆ ಸರ್ವೆ ಮಾಡಲು ಪತ್ರವನ್ನು ಬರೆದುಕೊಂಡಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಗ್ರಾಮ ಕರಿಣಿಕರಿಂದ ಹಾಗೂ ತಹಶೀಲ್ದಾರ್ ರವರಿಂದ ವರದಿ ಬರದೇ ಇದ್ದಾಗ ಮನೆಯನ್ನು ಕಟ್ಟಿಕೊಳ್ಳಲು ಪರವಾನಿಗೆಯನ್ನು ನೀಡಬಾರದಾಗಿತ್ತು. ಆ.ಸ.ನೌ ರವರ ಪ್ರಕಾರ ಸಾಮಾನ್ಯ ಸಭೆಯಲ್ಲಿ ಮಂಜೂರಾತಿ ನೀಡಿದ್ದರಿಂದ ಪರವಾನಿಗೆಯನ್ನು ನೀಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ ಇವರು ಅಭಿವೃದ್ಧಿ ಅಧಿಕಾರಿಗಳಾಗಿ ಇಂತಹ ತಕರಾರು ಇರುವ ಸಂದರ್ಭದಲ್ಲಿ ಅಧ್ಯಕ್ಷರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕಾಗಿತ್ತು, ಆದರೆ ಇವರು ಹೀಗೆ ಮಾಡಿರುವುದಿಲ್ಲ.

28.ಆ.ಸ.ನೌ ರವರು 2014 ರವರೆಗೆ ಗ್ರಾಮ ಕರಿಣಿಕರಿಂದ ಹಾಗೂ ತಹಶೀಲ್ದಾರ್ ರವರಿಂದ ಸರ್ವೆಯನ್ನು ಮಾಡಿರುತ್ತಾರೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಯಾವುದೇ ಪತ್ರ ವ್ಯವಹಾರನ್ನು ಮಾಡಿರುವುದಿಲ್ಲ. ಇವರು ತಮ್ಮ ಲಿಖಿತ ವಾದದಲ್ಲಿ ಗ್ರಾಮ ಕರಿಣಿಕರು ಮತ್ತು ತಹಶೀಲ್ದಾರ್ ರವರು ಸರ್ವೆ ಮಾಡದ ಕಾರಣ ತನಿಖಾಧಿಕಾರಿಗಳು ಅವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಲು ಸೂಚಿಸಬಹುದಾಗಿತ್ತು ಅಂತಾ ಹೇಳಿರುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಕಟ್ಟಡ ಪರವಾನಿಗೆಯನ್ನು ನೀಡುವ ಪೂರ್ವದಲ್ಲಿಯೇ ಸರ್ವೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಪರವಾನಿಗೆಯನ್ನು ನೀಡಬೇಕಾಗಿತ್ತು. ಆದರೆ ಇವರು ಮಾಡಿರುವುದಿಲ್ಲ. ಆ.ಸ.ನೌ ರವರು ದಿನಾಂಕ: 28/01/2014 ರಂದು ಈ ರೀತಿ ಯಾವುದೇ ಸರ್ವೆ ಮಾಡಲಾದ ದಾಖಲಾತಿಗಳು ಪಡೆದುಕೊಳ್ಳದಿದ್ದರೂ ಸಹಿತ ಶ್ರೀಮತಿ. ಸುಂದರಿ ಎಂ ಬಂಗೇರ ಇವರಿಗೆ ಮನೆ ನಂಬರ್‌ನ್ನು ಕೊಟ್ಟಿರುತ್ತಾರೆ. ಆ ವೇಳೆಯಲ್ಲಿಯೂ ಸಹ ಸ್ಥಳಕ್ಕೆ ಭೇಟಿ ನೀಡದೇ ತಾವು ಕೊಟ್ಟ ಪರವಾನಿಗೆಯಂತೆ ಕಟ್ಟಡ ಕಟ್ಟಿರುತ್ತಾರೆ ಅಥವಾ ಇಲ್ಲವೇ ಅಂತಾ ಪರಿಶೀಲಿಸದೇ ಮನೆ ನಂಬರ್‌ನ್ನು ಕೊಟ್ಟಿರುತ್ತಾರೆ ಅಂತಾ ಕಂಡುಬರುತ್ತದೆ.

29.ಆ.ಸ.ನೌ ರವರ ಪ್ರಕಾರ ತಾನು ನಿ.ಡಿ.2 ರ ಪ್ರಕಾರ ಪರವಾನಿಗೆಯನ್ನು ನೀಡಿರುತ್ತೇನೆ ಅಂತಾ ಹೇಳಿರುತ್ತಾರೆ. ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ, ಅದರಲ್ಲಿ ಕಟ್ಟಡ ರಚನೆಯ ಉದ್ದ,

ಅಗಲ, ಎತ್ತರ ಹಾಗೂ ಚಕ್‌ಬಂದಿಗಳನ್ನು ನಮೂದು ಮಾಡಿರುವುದಿಲ್ಲ. ಕೇವಲ ಇತರೆ ವಿವರ ಕಾಲಂನಲ್ಲಿ 137 ಚ.ಮೀ. ವಿಸ್ತೀರ್ಣ ಅಂತಾ ಮಾತ್ರ ನಮೂದು ಇರುತ್ತದೆ. The Karnataka Panchayath Raj (Grama Panchayaths Control Errection of Buildings) Rules 1994 ನಿಯಮ 3 ರಂತೆ ಕಟ್ಟಡವನ್ನು ಕಟ್ಟಲು ಒಬ್ಬ ವ್ಯಕ್ತಿಯು ಅರ್ಜಿಯನ್ನು ನೀಡಿದಾಗ, ಸದರಿ ಅರ್ಜಿಯ ಜೊತೆಗೆ ನಿಯಮ-3(2) ರಂತೆ ಮಾಹಿತಿಯನ್ನು ನೀಡಬೇಕಾಗುತ್ತದೆ. ಸದರಿ ನಿಯಮ-3 ಇದರ ಯಥಾವತ್ತಾಗಿ ನಮೂದಿಸಲಾಗಿದೆ.

*3. Application to erect a building,-(1) any person intending to erect a building shall, apply in writing to the Grama Panchayat for permission to erect the building and shall furnish, along with the application,-*

*(A) in case of erection of a new building,-*

*(i) a site plan, in duplicate, of the land on which he intends to erect the building, showing the position of the building to be erected in relation to the land:*

*Provided that, if the building to be erected is of less than five thousand rupees in value, it shall be sufficient if the site plan shows the size of the proposed building and its position in relation to the land.*

*(ii) the plan of the building to be erected such plan being in duplicate and showing,-*

*(a) The plan of the ground floor and of each other floor, if any, with sections and elevations;*

*(b) The levels of the foundation with reference to the level of the centre of the adjacent roads or streets;*

*(c) Depth and thickness of foundations;*

*(d) The dimensions and structure of roof:*

*Provided that if the building to be erected is of less than five thousand rupees in value it shall be sufficient to show levels at which the foundation of the lowest floor is proposed to be laid;*

*(B) in case of alteration or addition to any existing building or reconstruction of a building, a copy of the attested previous sanctioned plan:*

*Provided that if the applicant for any reasons sworn to in an affidavit, cannot produce the previous sanctioned plan of the existing building, then in such cases the plan of the existing Building along – with site plan shall be furnished and it shall be examined in the light of the existing rules and bye-laws relating to erection of building.*

*(2) The Grama Panchayat may on receipt of an application under sub-rule (1) require the applicant in writing to furnish such other particulars as may be necessary in the circumstances of the case, and on such requisition, the applicant shall furnish such particulars unless there are reasonable grounds for not furnishing such particulars.*

ಆ.ಸ.ನೌ ರವರು ಮೇಲೆ ಹೇಳಿದ ನಿಯಮದಂತೆ ಅರ್ಜಿದಾರರಿಂದ ಪಡೆದುಕೊಂಡ ಅರ್ಜಿಯ ಪ್ರತಿಯನ್ನು ದಾಖಲು ಮಾಡಿರುವುದಿಲ್ಲ.

30. ಆ.ಸ.ನೌ ರವರ ಪ್ರಕಾರ ತಾನು ಶ್ರೀಮತಿ. ಸುಂದರಿ ಎಂ ಬಂಗೇರ ಇವರಿಗೆ ದಿನಾಂಕ: 07/09/2012 ರಂದು ನೋಟಿಸ್ ನೀಡಿ ಕಟ್ಟಡದ ನಿರ್ಮಾಣದ ಕೆಲಸವನ್ನು ಗಡಿಯನ್ನು ಗುರುತಿಸುವವರಿಗೆ ನಿಲ್ಲಿಸಬೇಕೆಂದು ತಿಳಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ನೋಟಿಸ್ ನೀಡಿದ ನಂತರ ಆ.ಸ.ನೌ ರವರು ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಕಟ್ಟಡ ಕೆಲಸವನ್ನು ನಿಲ್ಲಿಸಿರುತ್ತಾರೆ ಅಥವಾ ಇಲ್ಲವೇ ಎನ್ನುವ ಬಗ್ಗೆ ಸ್ಥಳ ಪರಿಶೀಲನೆ ಮಾಡದೇ ದಿನಾಂಕ: 28/01/2014 ರಂದು ಕಟ್ಟಡ ಕೆಲಸವನ್ನು ಪೂರ್ಣ ಆಗುವವರೆಗೆ ಕ್ರಮ ತೆಗೆದುಕೊಳ್ಳದೇ ಮನೆ ನಂಬರ್ ನೀಡಿದ್ದು ಕಂಡುಬಂದಿರುತ್ತದೆ. ತನಿಖಾಧಿಕಾರಿಗಳ ವರದಿಯಂತೆ ಆ.ಸ.ನೌ ರವರಿಗೆ ಶ್ರೀಮತಿ. ಸುಂದರಿ ಎಂ ಬಂಗೇರ ಇವರು ಸರ್ಕಾರಿ ಜಾಗದಲ್ಲಿ ಮನೆ ನಿರ್ಮಾಣ ಮಾಡಿರುವುದು ಪ್ರಾರಂಭದಿಂದಲೇ ಆ.ಸ.ನೌ ರವರ ಗಮನಕ್ಕೆ ಬಂದಿದ್ದರೂ ಸಹಿತ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಈ ವಿಷಯವನ್ನು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ರುಜುವಾತುಪಡಿಸಿರುತ್ತಾರೆ.

31. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

32. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಆ.ಸ.ನೌಕರ **ಶ್ರೀ. ಬಿ.ಆರ್ ಧರ್ಮೇಂದ್ರ ಕುಮಾರ್**, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಈದು ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು,

ಉಡುಪಿ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/05/2036 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

29/8/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ANNEXURES**

| Sl. No. | Particulars of Documents | |
|---|---|---|
| 1 | **Witncss examined on behalf of the Disciplinary Authority** | |
| | **PW-1** | Sri. Vijaykumar N S/o Adiraja Muraya, Karkala Taluk, Udupi District. |
| | **PW-2** | Sri. T Nagesh Shetty S/o Lingappa Shetty, Rtd. Dy.SP, Mangaluru. |
| 2 | **Documents marked on behalf of the Disciplinary Authority Ex.P-1 to Ex.P-26** | |
| | **Ex.P.1 & 1(a)** | Complaint given to this institution with signature. |
| | **Ex.P.2 & 2(a)** | Form No.1 with signature. |
| | **Ex.P.3 & 3(a)** | Form No.2 with signature (Affidavit). |
| | **Ex.P.4** | Gram panchayath proceedings dtd: 10/08/2012. |
| | **Ex.P.5** | Gram panchayath proceedings dtd: 07/09/2012. |
| | **Ex.P.6** | RTC. |
| | **Ex.P.7 & 7(a)** | Copy of Gram panchayath proceedings book dtd: 28/01/2014 with marked portion. |
| | **Ex.P.8** | Letter dtd: 28/02/2014 addressed by complainant. |
| | **Ex.P.9** | Copy of receipt. |
| | **Ex.P. 10** | Letter dtd: 18/06/2014 addressed to Tahasildar, Karkala. |
| | **Ex.P. 11** | Rejoinder dtd: 06/06/2015. |
| | **Ex.P.** | Photograph. |

| | | |
|---|---|---|
| | 12 | |
| | **Ex.P. 13** | Photograph. |
| | **Ex.P. 14** | Photograph. |
| | **Ex.P. 15** | Letter dtd: 07/09/2012 addressed to Gramakaranikaru, Idu Nooralabettu. |
| | **Ex.P. 16** | Letter dtd: 28/09/2012 addressed to Tahasildar, Karkala. |
| | **Ex.P. 17** | Notice dtd: 07/09/2012 issued by PDO, Idu Gram Panchayath. |
| | **Ex.P. 18** | Letter dtd: 04/01/2016 addressed to Tahasildar, Karkala. |
| | **Ex.P. 19** | Letter dtd: 18/01/2016 addressed by Tahasildar, Karkala. |
| | **Ex.P. 20** | Sketch map. |
| | **Ex.P. 21** | Letter dtd: 20/01/2016 addressed to PDO, Idu Gram Panchayath, Karkala. |
| | **Ex.P. 22** | Letter dtd: 25/01/2016 addressed by PDO, Idu Gram Panchayath, Karkala. |
| | **Ex.P. 23** | Statement of Smt. Sundari dtd: 27/01/2016. |
| | **Ex.P. 24 & 25** | Photograph. |
| | **Ex.P. 26 & 26 (a)** | Report dtd: 29/02/2016 submitted by Dy.SP, KLA, Udupi with signature. |

| | | |
|---|---|---|
| 3 | **Ex.D.1** | Gram panchayath proceedings dtd: 10/08/2012. |
| | **Ex.D.2** | License given to Smt. Sundari M. Bangera. |
| | **Ex.D.3** | Letter dtd: 14/06/2012 of PDO, Idu Gram Panchayath. |
| | **Ex.D.4** | Sketch map. |

Dated this the 29th August, 2022

Paradeshi 29/8/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.